**ಪ್ರಧಾನ ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ.ಸಿ. ನಂಬರ ಃ 2101/2024**

ಪಿರ್ಯಾದುದಾರರು : ಶ್ರೀ ನೂರುಲಾಮೀನ್ ತಂದೆ ಜೈನುಲಾಬ್ದಿನ್ ಲೌನಾ

**– ವಿರುದ್ಧ –**

ಆರೋಪಿತರು ಶ್ರೀ ಜಗದೀಶ ತಂದೆ ಪದ್ಮಯ್ಯಾ ಜೈನ್

ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಮೇರೆಗೆ ಆರೋಪಿತನ ಹೇಳಿಕೆ

ಪ್ರಶ್ನೆ 1 : ಈ ಪ್ರಕರಣದಲ್ಲಿನ ಪಿರ್ಯಾದಿದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ಕೇಳಿದ್ದೀರಾ?

ಉತ್ತರ : **Yes**

ಪ್ರಶ್ನೆ 2 ಪ್ರಾ.ಸಾ.1 ಶ್ರೀ ನೂರುಲಾಮೀನ್ ತಂದೆ ಜೈನುಲಾಬ್ದಿನ್ ಲೌನಾ ಇವರು ತಮ್ಮ ಸಾಕ್ಷಿಯಲ್ಲಿ ಹೇಳಿರುವುದೇನೆಂದರೆ, ಆರೋಪಿತರಾದ ನೀವು ಪಿರ್ಯಾದುದಾರರಿಂದ ರೂ.5,50,000/– ಮೊತ್ತವನ್ನು ನಗದು ಸಾಲವಾಗಿ ತೆಗೆದುಕೊಂಡು, ಡಿಸೆಂಬರ್–2022 ರೊಳಗೆ ಪಾವತಿಸುವುದಾಗಿ ಹೇಳಿದ್ದು, ಮರುಪಾವತಿ ಮಾಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : **False**

ಪ್ರಶ್ನೆ 3 ಪ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನೀವು ಸಾಲದ ಮರುಪಾವತಿಗಾಗಿ ಐಸಿಐಸಿಐ ಬ್ಯಾಂಕ್ ಭಟ್ಕಳ ಶಾಖೆ ಇದರ ಚೆಕ್ ಸಂಖ್ಯೆಃ 011915 ಮೊತ್ತ ರೂ.5,50,000/–ಕ್ಕೆ ದಿನಾಂಕಃ 28–02–2024 ಎಂದು ನಮೂದಿಸಿ ನಿಶಾನೆ ಪಿ–1 ರಂತೆ ಚೆಕ್‌ನ್ನು ಪಿರ್ಯಾದುದಾರರಿಗೆ ನೀಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : **False**

ಪ್ರಶ್ನೆ 4 ಪ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದ್ರಿ ಚೆಕ್ಕನ್ನು ಫಿರ್ಯಾದಿದಾರರು ದಿ. ಸ್ಟೇಟ ಬ್ಯಾಂಕ್ ಇಂಡಿಯಾ, ಭಟ್ಕಳ ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರಪಡಿಸಿದಾಗ "FUNDS INSUFFICIENT" ಎಂಬ ಹಿಂಬರಹದೊಂದಿಗೆ ನಿಶಾನೆ ಪಿ–3 ರಂತೆ ಅಮಾನ್ಯಗೊಂಡು ದಿನಾಂಕಃ 01–05–2024 ರಂದು ಮತ್ತು "Payment stopped by drawer" ಎಂಬ ಹಿಂಬರಹದೊಂದಿಗೆ ನಿಶಾನೆ ಪಿ–4 ರಂತೆ ಅಮಾನ್ಯಗೊಂಡು, ದಿನಾಂಕಃ 01–05–2024 ರಂದು ವಾಪಾಸ್ಸು ಬಂದಿರುತ್ತದೆ ಎಂದು ಈ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : **False**

ಪ್ರಶ್ನೆ 5 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಚೆಕ್ ಅಮಾನ್ಯಗೊಂಡ ಕಾರಣದಿಂದ ಫಿರ್ಯಾದಿದಾರರು ದಿನಾಂಕಃ 27-05-2024 ರಂದು ತಮ್ಮ ವಕೀಲರ ಮೂಲಕ ನಿಮಗೆ ಲೀಗಲ್ ನೋಟಿಸನ್ನು ನಿಪಿ-5(a) ರಂತೆ ನೋಟಿಸ್ ನೀಡಿದ್ದು, ಸದರಿ ನೋಟಿಸ್ ನ್ನು ನೀವು ಸ್ವೀಕರಿಸದ ಕಾರಣ ನಿಪಿ-5 ರಂತೆ Unclaimed ಅಂತಾ ದಿನಾಂಕಃ 31-05-2024 ರಂದು ವಾಪಾಸು ಬಂದಿರುತ್ತದೆ. ಆದರೂ ನೀವು ಸದ್ರಿ ನೋಟಿಸಿಗೆ ಉತ್ತರವನ್ನಾಗಲಿ ಅಥವಾ ಹಣವನ್ನು ಮರುಪಾವತಿಸಿದ್ದಾಗಲಿ ಇರುವುದಿಲ್ಲ, ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರೂ ಸಹ ಚೆಕ್‌ನ್ನು ನೀಡಿ ಅಪರಾಧವೆಸಗಿರುತ್ತೀರಿ ಎಂದು ಈ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : **False**

ಪ್ರಶ್ನೆ 6 ನಿಮಗೆ ಹೇಳಲು ಇನ್ನೇನಾದರೂ ಇದೆಯಾ?

ಉತ್ತರ : **No**

ಪ್ರಶ್ನೆ 7 ನಿಮ್ಮ ಪರವಾಗಿ ಸಾಕ್ಷಿ ಇದೆಯಾ?

ಉತ್ತರ : **Yes**

(ಈ ಮೇಲಿನ ಆರೋಪಿಯ ಎಲ್ಲಾ ಹೇಳಿಕೆಗಳನ್ನು ನನ್ನ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿದ್ದು, ಆತ ಹೇಳಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿರುತ್ತದೆ.)

**Sd/-**

(**ಶ್ರೀಮತಿ.ದೀಪಾ ಅರಳಗುಂಡಿ**)
ಪ್ರಧಾನ ಸಿವಿಲ್ ಜಡ್ಜ ಮತ್ತು

ದಿನಾಂಕಃ 20-12-2025 ಪ್ರ. ದ. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.